

# ಧಮ್ ಮಾರೊ ಧಮ್...!

ಚಿತ್ರೀಕರಣದುದ್ದಕ್ಕೂ ತನ್ನಿಂದ ತಪ್ಪಿಸಿಕೊಂಡೇ ಓಡಾಡುತ್ತಿದ್ದವಳನ್ನು ಈಗ ಕೈಬಿಟ್ಟರೆ ಮತ್ತೆ ಸಿಗುವುದಿಲ್ಲ ಎಂದು ಅವನಿಗೆ ಖಾತ್ರಿಯಾಗಿದೆ. ಹಾಗಾಗಿ 'ಅವಳನ್ನು ಟೇಸ್ಟ್ ಮಾಡದೆ ಬಿಡಲಾರೆ. ಎಲ್ಲಿಗೆ ತಪ್ಪಿಸ್ಕೊಂಡು ಹೋಗ್ತಾಳೋ ನೋಡ್ತೀನಿ' ಎಂದು ಬಳಗದವರ ಮುಂದೆ ಕೊಚ್ಚಿಕೊಂಡು ಅವಳಿದ್ದ ಹೋಟೆಲಿಗೆ ಬಂದಿದ್ದ. ಆ ನಟಿಗೆ ನಿಜಕ್ಕೂ ತಪ್ಪಿಸಿಕೊಳ್ಳಲು ದಾರಿಗಳಿರಲಿಲ್ಲ. ಹಣವಿಲ್ಲದೆ ಆಸ್ಪತ್ರೆಗೆ ಹೋಗುವ ಹಾಗಿರಲಿಲ್ಲ. ತನ್ನ ಪರಿಸ್ಥಿತಿಯನ್ನು ಹೀರೊ ಎದುರಿಗೆ ಹೇಳಿಕೊಂಡಳು, ಬೇಡಿಕೊಂಡಳು. ಆದರೆ ಅವನ ನಾಲಿಗೆ 'ಟೇಸ್ಟ್'ಗಾಗಿ ಹಪಹಪಿಸುತ್ತಿತ್ತು. ಬಲವಂತವಾಗಿ ಅವಳ ರೂಮಿಗೇ ಎಳೆದುಕೊಂಡು ಹೋದ.

ಇಂಥ ಹತ್ತು ನೂರು ಕಥೆಗಳು ಗಾಂಧಿನಗರದ ಹರಟೆಕಟ್ಟೆಗಳಲ್ಲಿ, ಹಿರಿಯ ಪಿಆರ್‌ಓಗಳು, ಪತ್ರಕರ್ತರು, ಸಿನಿಮಾದ ಕಲಾವಿದರು ಎಲ್ಲರ ಬಾಯಿಯಲ್ಲಿಯೂ ಈಗಲೂ ಹರಿದಾಡುತ್ತಲೇ ಇರುತ್ತವೆ. ವಿಪರ್ಯಾಸವೆಂದರೆ ಇದನ್ನು ಯಾರೂ ಆ ವ್ಯಕ್ತಿಯ ದುರ್ಗುಣ ಎನ್ನುವ ಹಾಗೆ ಹೇಳುವುದೇ ಇಲ್ಲ. ಬದಲಿಗೆ ಅವನ 'ಗಂಡಸ್ತನ'ದ ಪತಾಕೆಗಳಂತೆ ಹೇಳಿ ಕೊಂಡಾಡುತ್ತಿರುತ್ತಾರೆ.

ಅದು 'ಆ ಕಾಲ'ದ ಕಥೆಯಾಯ್ತು. ಈಗ ಹಾಗಿಲ್ಲ ಎನ್ನುವಂತಿದೆಯೇ? ಖಂಡಿತ ಇಲ್ಲ. ಕಾಲ ಬದಲಾದ ಹಾಗೆ ಬಾಟಲಿ ಬದಲಾಗಬಹುದೇ ಹೊರತು; ಒಳಗಿನ ಮದ್ಯವಲ್ಲ. ಆಗಿನ ನಿರ್ಮಾಪಕರು, ಪತ್ರಕರ್ತರ ಎದುರಿಗೇ ನಟಿಯನ್ನು ತೊಡೆಯ ಮೇಲೆ ಕೂಡಿಸಿಕೊಂಡು ಚಿಕನ್ ತಿನ್ನಿಸುತ್ತಿದ್ದರು. ಈಗ ಹಾಗಲ್ಲ, ಅವಕಾಶ ಕೇಳಿಕೊಂಡ ಬಂದ ಹುಡುಗಿಯರನ್ನು ಹಸಿರು ಸಿರಿಯ ನಡುವಿನಲ್ಲಿನ ತಮ್ಮದೇ ಫಾರ್ಮ್‌ಹೌಸ್‌ಗೆ ಫೋಟೊಶೂಟ್‌ಗೆ ಕರೆಸಿಕೊಳ್ಳಲಾಗುತ್ತದೆ. ಅಲ್ಲಿ ನಿರ್ಮಾಪಕನೇ ಫೋಟೊಗ್ರಾಫರ್! ತನ್ನ ಮಗಳ ವಯಸ್ಸಿನ ನಟಿಯರನ್ನು ರಾತ್ರಿ ಊಟಕ್ಕೆ ವಿಶೇಷ ಜಾಗಕ್ಕೆ ಕರೆಯಲಾಗುತ್ತದೆ. ಅದು

## ಕಾಯ್ದೆಯ ಬಲ

ಭಾರತದಲ್ಲಿ ಮಾದಕ ಪದಾರ್ಥಗಳ ಹಂಚಿಕೆ ಮತ್ತು ಸೇವನೆಯನ್ನು ನಿಷೇಧಿಸುವ ಎನ್‌ಡಿಪಿಎಸ್ (THE NARCOTIC DRUGS AND PSYCHOTROPIC SUBSTANCES ACT) ಅನ್ನು 1985 ನವೆಂಬರ್ 14ರಂದು ಜಾರಿಗೆ ತರಲಾಯಿತು. ಈ ಕಾಯ್ದೆಯ ಪ್ರಕಾರ ಯಾವುದೇ ವ್ಯಕ್ತಿ ನಿರ್ದಿಷ್ಟ ಮಾದಕ ಪದಾರ್ಥಗಳನ್ನು ಉತ್ಪಾದಿಸುವುದು, ತಯಾರಿಸುವುದು, ಬೆಳೆಸುವುದು, ಹೊಂದುವುದು, ಮಾರಾಟ ಮಾಡುವುದು, ಖರೀದಿಸುವುದು, ಸಾಗಣೆ ಮಾಡುವುದು, ಶೇಖರಿಸುವುದು ಕಾನೂನು ಬಾಹಿರ. 1988, 2008, 2014ರಲ್ಲಿ ಮೂರು ಬಾರಿ ಈ ಕಾಯ್ದೆಗೆ ತಿದ್ದುಪಡಿ ಮಾಡಲಾಗಿದೆ. ಈ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು 1986ರಲ್ಲಿ 'ಮಾದಕ ಪದಾರ್ಥ ನಿಯಂತ್ರಣ ದಳ'ವನ್ನು ರಚಿಸಲಾಗಿದೆ.

ಕರ್ನಾಟಕದಲ್ಲಿ ಮಾದಕ ಪದಾರ್ಥ ಹಂಚಿಕೆ ಮಾಡುವವರನ್ನು ಕೋಕಾ (ಕರ್ನಾಟಕ ಸಂಘಟಿತ ಅಪರಾಧ ನಿಯಂತ್ರಣ ಕಾಯ್ದೆ) ಅಡಿಯಲ್ಲಿಯೂ ಬಂಧಿಸಲಾಗುತ್ತದೆ.